# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | **1512 (1607)** |
| ಸದಸ್ಯರ ಹೆಸರು | : | ಡಾ. ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | **18.03.2026** |

| ಪ್ರ.ಸಂ. | **ಪ್ರಶ್ನೆ** | **ಉತ್ತರ** |
|---|---|---|
| (ಅ) | ಯಾದಗಿರಿ ನಗರದ ಹೊರವಲಯದ ಅಬ್ಬೆತುಮಕೂರು ಬಳಿ ಆರ್.ಟಿ.ಒ ಕಛೇರಿ ನಿರ್ಮಿಸಲಾಗುತ್ತಿದೆಯೇ;<br>ನಿರ್ಮಿಸುತ್ತಿದ್ದಲ್ಲಿ, ಸದರಿ ಕಛೇರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಇದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; | ಯಾದಗಿರಿ ನಗರದ ಹೊರವಲಯದ ಅಬ್ಬೆತುಮಕೂರು ಬಳಿ ಆರ್.ಟಿ.ಒ ಕಛೇರಿ ನಿರ್ಮಿಸಲಾಗುತ್ತಿದೆ. ಸದರಿ ಕಾಮಗಾರಿಯನ್ನು 2022-23ನೇ ಸಾಲಿನಲ್ಲಿ ಪ್ರಾರಂಭಿಸಲಾಗಿರುತ್ತದೆ. ಕಾಮಗಾರಿಯ ಅಂದಾಜು ಮೊತ್ತ ರೂ.500 ಲಕ್ಷಗಳಾಗಿದ್ದು, ಇದುವರೆಗೆ ರೂ.281.08 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |
| (ಆ) | ಸದರಿ ಕಾಮಗಾರಿ ವಿಳಂಬವಾಗಲು ಕಾರಣವೇನು ಹಾಗೂ ಪ್ರಸ್ತುತ ಕಾಮಗಾರಿ ವಸ್ತು ಸ್ಥಿತಿ ಏನು; (ವಿವರ ನೀಡುವುದು) | ಕಾಮಗಾರಿಯನ್ನು ಪ್ರಾರಂಭಿಸುವಾಗ ಸದರಿ ನಿವೇಶನವು ತಗ್ಗು ಪ್ರದೇಶದಲ್ಲಿದ್ದು ನೀರು ತುಂಬಿದ್ದರಿಂದ ಮಳೆಗಾಲ ಮುಗಿದ ನಂತರ ನೀರನ್ನು ಹೊರಚೆಲ್ಲಿ ಮಣ್ಣು ಪರಿಕ್ಷೆಗೆ ಒಳಪಡಿಸಿ, ರಚನಾ ವಿನ್ಯಾಸಗಳನ್ನು ಪಡೆದು ಕಾಮಗಾರಿ ಪ್ರಾರಂಭಿಸುವಲ್ಲಿ ವಿಳಂಬವಾಗಿರುತ್ತದೆ.<br><br>ಪ್ರಸ್ತುತ ಕಾಮಗಾರಿ ಲಿಂಟಲ್ ಹಂತದವರೆಗೆ ಪ್ರಗತಿಯಲ್ಲಿದೆ. |
| (ಇ) | ಈ ಆರ್.ಟಿ.ಒ ಕಛೇರಿಯ ಉದ್ಘಾಟನೆಯನ್ನು ಯಾವಾಗ ಮಾಡಲಾಗುವುದು ಹಾಗೂ ಸಾರ್ವಜನಿಕರ ಸೇವೆಗೆ ಎಂದಿನಿಂದ ಲಭ್ಯವಾಗುವುದು? (ವಿವರ ನೀಡುವುದು) | ಕಟ್ಟಡ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಪ್ರಸಕ್ತ ವರ್ಷದಲ್ಲಿಯೇ ಅದನ್ನು ಬೇಗ ಸಾರ್ವಜನಿಕರ ಸೇವೆಗೆ ಲಭ್ಯವಾಗಿಸಲಾಗುವುದು. |

**ಟಿಡಿ 28 ಟಿಡಿಒ 2026**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು